**<u>2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ</u>**

**ಓ.ಎಸ್.293/2014**

**ಪಿ.ಡಬ್ಲ್ಯೂ- 1** ಅಜೀರಾ

**ಪ್ರಮಾಣೀಕರಿಸಿದ ದಿನಾಂಕ:18.03.2024**

**<u>ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ : -</u>**

ಪ್ರತಿವಾದಿಗಳು ನನ್ನ ಅಣ್ಣಂದಿರು. ಪ್ರಸ್ತುತ ದಾವೆಯನ್ನು ಪಾಲು ವಿಭಾಗ ಕೇಳಿ ಸಲ್ಲಿಸಿರುತ್ತೇನೆ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಮೊದಲು ಪ್ರತಿವಾದಿಗಳಿಗೆ ನಾನು ಪಾಲನ್ನು ಕೇಳಿದ್ದು, ಅವರು ನೀಡದ ಕಾರಣ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ. ಪಾಲನ್ನು ಯಾವ ದಿನ, ಯಾವ ಸಾಲಿನಲ್ಲಿ, ಪ್ರತಿವಾದಿಗಳಿಗೆ ಕೇಳಿರುತ್ತೇನೆ ಎಂದು ನನಗೆ ನೆನಪಿಲ್ಲ. ಪ್ರಸ್ತುತ ದಾವಾ ಆಸ್ತಿಗಳಲ್ಲಿ ನನಗೆ ಭಾಗವಿಲ್ಲ ಎಂದು ನನ್ನ ಅಣ್ಣಂದಿರು ಹೇಳಿದ ನಂತರ ನಾನು ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ತಾಯಿ ನನ್ನ ಅಣ್ಣಂದಿರಿಗೆ ದಾಖಲೆಗಳನ್ನು ಬರೆದುಕೊಟ್ಟಿರುತ್ತಾರೆ ಆದ್ದರಿಂದ ನನಗೆ ಪಾಲು ಇರುವುದಿಲ್ಲ ಎಂದು ಪ್ರತಿವಾದಿಗಳು ನನಗೆ ಹೇಳಿರುತ್ತಾರೆ. ವಾದ ಪತ್ರದಲ್ಲಿ ದಾವೆ ಸಲ್ಲಿಸುವ ಸಮಯದಲ್ಲಿ ನನ್ನ ತಾಯಿ ನನ್ನ ಅಣ್ಣಂದಿರಿಗೆ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿರುವುದಿಲ್ಲ ಎಂದು ಹೇಳೀ ದಾವೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತಗಳನ್ನು ನಾನು ನೋಡಿದ್ದು, ಅವುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನೂರ್ ಜಾನ್ ನನ್ನ ಅಕ್ಕ. 1 ರಿಂದ 8 ನೇ ವಾದಿಗಳು ಸದರಿ ನೂರ್ ಜಾನ್ ರವರ ಮಕ್ಕಳಾಗಿರುತ್ತಾರೆ. ಅಸ್ಲಂ ಖಾನ್ ಮತ್ತು ಅಮ್ಜದ್ ಖಾಮ್ ಮತ್ತು ಸಲೀಂ ಖಾನ್ ನನ್ನ ಅಕ್ಕನ ಮಕ್ಕಳು.

ನನ್ನ ತಂದೆಯ ಹೆಸರು ಅಮೀರ್ ಸಾಬ್. ನಾವು ನನ್ನ ತಂದೆಯ ಎರಡನೇ ಪತ್ನಿಯ ಮಕ್ಕಳು ಎಂದರೆ ಸರಿ. ನನ್ನ ತಾಯಿಯ ಹೆಸರು ಆಯಿಷಾಬಿ. ದಾವಾ ಸ್ವತ್ತುಗಳು ನನ್ನ ತಂದೆಯ ಜೀವೀತಾವಧಿಯಲ್ಲಿ ನ್ಯಾಯಲಯದಲ್ಲಿ ವಿಭಾಗವಾಗಿರುತ್ತವೆ ಎಂದರೆ ಸರಿ. ಸದರಿ ವಿಭಾಗವಾದ, ಕೇಸ್ ಸಂಖ್ಯೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆ ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ವಾದಪತ್ರದಲ್ಲಿ ಓ.ಎಸ್.ನಂ.941/2007 ದಾವೆಯಲ್ಲಿ ದಾವಾ ಸ್ವತ್ತುಗಳು ರಾಜಿಯಾಗಿ ನಮಗೆ ಹಾಗೂ ಪ್ರತಿವಾದಿಗಳಿಗೆ ಬಂದಿರುತ್ತವೆ ಎಂದು, ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ತಂದೆ

ಜೀವಂತವಿದ್ದಾಗ ರಾಜಿಯಾಗಿ ನನ್ನ ತಂದೆ ಸಹಿ ಹಾಕಿ ಆಸ್ತಿಗಳು ವಿಭಾಗವಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ರಾಜಿಯ ಪ್ರಕಾರ ನನ್ನ ತಂದೆಗೆ ಬರಬೇಕಾದ ಆಸ್ತಿಯ ಬದಲಾಗಿ, ನನ್ನ ತಂದೆಗೆ ರೂ.50,000/- ನಗದನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಕ್ಕ ಮರಣ ಹೊಂದಿ ಸುಮಾರು 6-7 ವರ್ಷಗಳಾಗಿರುತ್ತವೆ. ಸದರಿ ರಾಜಿ ಪ್ರಕಾರ ರಾಧಾದೇವಿಯನ್ನುವವರಿಗೆ, ಅರ್ಧ ಭಾಗವನ್ನು ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ನನ್ನ ಅಕ್ಕ ನೂರ್ ಜಾನ್ ಮತ್ತು ಅಸ್ಲಂ ಖಾನ್, ಅಮ್ಜದ್ ಖಾನ್, ಸಲೀಂ ಖಾನ್ ಸೇರಿ ಪ್ರತಿವಾದಿ ನಂ.1, 5 ಮತ್ತು 6 ರವರ ಪರವಾಗಿ ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಸಹಿಯನ್ನು ಇಂಗ್ಲೀಷ್ ನಲ್ಲಿ ಮಾಡುತ್ತೇನೆ. ನಿ.ಪಿ.13 ರಲ್ಲಿ ಇರುವ ಸಹಿಗಳು  ನನ್ನದೇ ಆಗಿದ್ದು, ಅವುಗಳನ್ನು ಮೋಸದಿಂದ ಪಡೆದಿರುತ್ತಾರೆ. ಸಾಕ್ಷಿ ನಿ.ಪಿ.13 ರಲ್ಲಿರುವ ತಮ್ಮ ಭಾವಚಿತ್ರವನ್ನು ಒಪ್ಪಿಕೊಳ್ಳುತ್ತಾರೆ. ಅದೇ ರೀತಿ ಇತರ ಈ ಹೇಳಿದವರ ಸಹಿಗಳು ಮತ್ತು ಭಾವಚಿತ್ರಗಳು ಇರುತ್ತವೆ ಎಂದರೆ ಸರಿ. 2009 ನೇ ಸಾಲಿನಲ್ಲಿ ನಿ.ಪಿ.13 ಅನ್ನು ಬರೆಯಿಸಿಕೊಂಡಿರುತ್ತಾರೆ. ಪ್ರತಿವಾದಿಗಳಿಗೆ 2009 ನೇ ಸಾಲಿನಲ್ಲಿ ನನ್ನ ಭಾಗಕ್ಕೆ ಬಂದ ಜಮೀನನ್ನು ತೋರಿಸುವಂತೆ ಕೇಳಿರುವುದಿಲ್ಲ. ನಾನು ಪ್ರಸ್ತುತ ದಾವೆ ಸಲ್ಲಿಸಿದ ನಂತರ ನಿ.ಪಿ.13 ರ ಬಗ್ಗೆ ನನಗೆ ತಿಳಿದಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**